ವಿ ರೈತ ಮಿತ್ರ



■ಅಡಕೆಯಲ್ಲಿ ಹೂಗೊಂಚಲು ತಿನ್ನುವ ಹುಳುವಿನ ಹಾವಳಿ ಹೆಚ್ಚಿದ್ದು, ಇದಕ್ಕೆ ಸೂಕ್ತ ಪರಿಹಾರ ತಿಳಿಸಿ.

| ವಿವೇಕ್ ಶಿವಮೊಗ್ಗ

ಹೂಗೊಂಚಲು ತಿನ್ನುವ ಮರಿಹುಳುಗಳು ಹೂಗೊಂಚಲನ್ನು ರೇಷ್ಮೆಯಂತಹ ನೂಲಿನಿಂದ ಗೂಡು ಮಾಡುತ್ತವೆ. ನಂತರ ಒಳಸೇರಿ ಗಂಡು ಹೂಗಳನ್ನು ತಿನ್ನುತ್ತವೆ. ಇದರಿಂದಾಗಿ ಹೂಗಳ ಬಣ್ಣ ಬದಲಾಗುತ್ತದೆ ಹಾಗೂ ಕ್ರಮೇಣ ಒಣಗುತ್ತವೆ. ಹಾವಳಿ ಹೆಚ್ಚಿದ್ದಲ್ಲಿ ಬೆಳೆಯ ಇಳುವರಿ ಕಡಿಮೆಯಾಗುತ್ತದೆ.

ನಿರ್ವಹಣೆ: ಮರಿಹುಳುಗಳ ಹತೋಟಿಗಾಗಿ ಚಿಕ್ಕ ಪಾಲಿಥಿನ್ ಚೀಲದಲ್ಲಿ ರಂಧ್ರಗಳನ್ನು ಮಾಡಿ ಥೈಯೋಮಿಥಾಕ್ಸಾನ್ 25 ಡಬ್ಲ್ಯು.ಜಿ 2.0 ಗ್ರಾಂ ನಂತೆ ಅಡಕೆ ಸಸಿಗಳ ಅತ್ಯಂತ ಒಳಗಿನ ಎರಡು ಎಲೆಗಳ ಸುಳಿಯಲ್ಲಿ ಏಪ್ರಿಲ್ -ಮೇ ತಿಂಗಳಿನಲ್ಲಿ ಇಡಬೇಕು ಅಥವಾ ಪ್ರತಿ ಲೀಟರ್ ನೀರಿಗೆ ಥೈಯೋಮಿಥಾಕ್ಸಾನ್ 25 ಡಬ್ಲ್ಯು..ಜಿ 0.25 ಗ್ರಾಂನಂತೆ ಬೆರೆಸಿ ಸಸಿಗಳ ಸುತ್ತಲೂ ಮತ್ತು ಒಳಗಿನ ಎಲೆಗಳ ಸುಳಿಗಳಲ್ಲಿ ಸಿಂಪಡಿಸಬೇಕು. ಇದರ ಬಾಧೆ ಮುಂದುವರಿದಲ್ಲಿ 45 ದಿನಗಳ ಅಂತರದಲ್ಲಿ ಇದೇ ಕೀಟನಾಶಕವನ್ನು ಪುನರಾವರ್ತಿಸಬೇಕು.

| ಡಾ. ಕೆ.ಪಲ್ಲವಿ ಸಸ್ಯ ಸಂರಕ್ಷಣಾ ತಜ್ಞರು

ಕೃಷಿ ವಿವಿಯ ಕೋರ್ಸ್‌ಗೆ ಅರ್ಜಿ ಸಲ್ಲಿಕೆ ವಿಸ್ತರಣೆ

ಬೆಂಗಳೂರು: ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಡಿಪ್ಲೊಮಾ ಮತ್ತು ಸರ್ಟಿಫಿಕೇಟ್ ಕೋರ್ಸ್‌ಗಳಿಗೆ ಅರ್ಜಿ ಸಲ್ಲಿಸುವ ಅವಧಿಯನ್ನು ಮೇ 3 ರವರೆಗೂ ವಿಸ್ತರಿಸಲಾಗಿದೆ. ಒಂದು ವರ್ಷದ ಕೃಷಿ ಡಿಪ್ಲೊಮಾ, ಸ್ನಾತಕೋತ್ತರ ಕೃಷಿ ಡಿಪ್ಲೊಮಾ, ಸರ್ಟಿಫಿಕೇಟ್ ಕೋರ್ಸ್‌ಗಳಾದ ಬೀಜೋತ್ಪಾದನೆ ತಾಂತ್ರಿಕತೆಗಳು, ಯಂತ್ರೋಪಕರಣಗಳ ನಿರ್ವಹಣೆ, ಜೇನು ಸಾಕಾಣಿಕೆ, ಸಮಗ್ರ ಕೃಷಿ, ಸಾವಯವ ಕೃಷಿ (ಅಂಚೆ ಶಿಕ್ಷಣ) ಕೋರ್ಸ್‌ಗೆ ಏ.12 ರೊಳಗೆ ಈ ಮೊದಲು ಅರ್ಜಿ ಸಲ್ಲಿಸಬೇಕಾಗಿತ್ತು. ಇದನ್ನು ಮೇ 3 ರವರೆಗೂ ವಿಸ್ತರಿಸಲಾಗಿದೆ. ಹೆಚ್ಚಿನ ಮಾಹಿತಿಗೆ ದೂ: 080 23636353 ಸಂಪರ್ಕಿಸಬಹುದು ಎಂದು ವಿವಿ ಪ್ರಕಟಣೆ ತಿಳಿಸಿದೆ.

Kannadaprabha pg 04

Vijayavani pg 06

ರಸಭರಿತ ಮಾವು ಭರಪೂರ

■ ಮಾವಿನಹಣ್ಣು ಸೀಸನ್ ಶುರು

■ 1.39 ಲಕ್ಷ ಹೆಕ್ಟೇರ್‌ನಲ್ಲಿ ಬೆಳೆ

■ 8-10 ಲಕ್ಷ ಮೆಟ್ರಿಕ್ ಟನ್ ಇಳುವರಿ ನಿರೀಕ್ಷೆ

■ ಪವನ್ ಆಚಾರ್ಯ ನೀರ್ಚಾಲು ಬೆಂಗಳೂರು

ರಾಜ್ಯದಲ್ಲಿ ಈ ವರ್ಷ 1.39 ಲಕ್ಷ ಹೆಕ್ಟೇರ್‌ನಲ್ಲಿ ಮಾವು ಬೆಳೆಯಲಾಗಿದ್ದು, ತಾಪಮಾನದಲ್ಲಿ ಏರಿಕೆ ಕಂಡುಬಂದ ಹಿನ್ನೆಲೆಯಲ್ಲಿ ಕಾಯಿ ಕಚ್ಚುವುದು ಹಾಗೂ ಕಾಯಿ ಬೀಳುವುದಕ್ಕೆ ಕಾರಣವಾಗಿದೆ. ಇಳುವರಿಯಲ್ಲಿ 2-3 ಲಕ್ಷ ಮೆಟ್ರಿಕ್ ಟನ್ ಕಡಿಮೆಯಾಗುವ ಸಾಧ್ಯತೆ ಇದ್ದು, ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮವು 8-10 ಲಕ್ಷ ಮೆಟ್ರಿಕ್ ಟನ್ ಇಳುವರಿ ನಿರೀಕ್ಷಿಸಿದೆ. ಲಭ್ಯವಿರುವ ಇಳುವರಿಯಲ್ಲಿ ಈ ಬಾರಿ ಕೀಟ- ರೋಗಬಾಧೆ ಕಡಿಮೆ ಇದ್ದುದರಿಂದ ಗುಣಮಟ್ಟದ ಹಣ್ಣುಗಳು ಮಾರುಕಟ್ಟೆಯನ್ನು ಪ್ರವೇಶಿಸಲಿದೆ. ಬೆಳೆಗಾರರು ಹಾಗೂ ಗ್ರಾಹಕರ ಮಧ್ಯೆ ನೇರ ಮಾರುಕಟ್ಟೆ ಸಂಪರ್ಕ ಅಭಿವೃದ್ಧಿಪಡಿಸಲು ಲಾಲ್‌ಬಾಗ್ ಮತ್ತು ರಾಜ್ಯದ ಇತರ ಮಾವು ಬೆಳೆಯುವ ಜಿಲ್ಲೆಗಳಲ್ಲಿ ಮಾವಿನಹಣ್ಣಿನ ಮೇಳವನ್ನೂ ಹಮ್ಮಿಕೊಳ್ಳುತ್ತಿದೆ. ಋತುಮಾನದ ಹಣ್ಣಾದ ಮಾವನ್ನು ತಿಂಗಳುಗಟ್ಟಲೆ ಕಾದು ಕುಳಿತು, ನೆಚ್ಚಿಕೊಂಡು ತಿನ್ನುವವರ ಸಂಖ್ಯೆ ಅಧಿಕವಿದ್ದು, ಅಂಥವರಿಗೆ ಏಪ್ರಿಲ್, ಮೇ ತಿಂಗಳುಗಳು ಉತ್ಸವದ ದಿನಗಳಾಗಿದೆ. ಈ ಸೀಸನ್‌ಗೆ 'ಹಣ್ಣುಗಳ ರಾಜ' ಮಾರುಕಟ್ಟೆಗೆ ಲಗ್ಗೆ ಇಟ್ಟಾಗಿದೆ. ಇಳುವರಿ ಕೊಂಚ ಕಡಿಮೆ ಇದ್ದರೂ ಗುಣಮಟ್ಟದಲ್ಲಿ ಕೊರತೆ ಇಲ್ಲದಿರುವುದು ಖುಷಿ ಕೊಟ್ಟಿದೆ.



ವಿಜಯವಾಣಿ ಚಿತ್ರಗಳು



ಆನ್‌ಲೈನ್ ಪೋರ್ಟಲ್‌ಗಳ ಮೂಲಕ ಬಂದ ಆರ್ಡರ್‌ಗಳನ್ನು ನಾವು ರೈತರಿಗೆ ತಿಳಿಸುವ ಮೂಲಕ ಪೂರೈಕೆ ಮಾಡುವ ಕೆಲಸಗಳನ್ನು ಮಾಡುತ್ತೇವೆ. ಸದ್ಯ 200-300 ಪೂರೈಕೆದಾರರಿದ್ದಾರೆ. ಜಿಪಿಒ ಮೂಲಕ ಡೆಲಿವರಿ ನಡೆಯುತ್ತದೆ.

| ಸಿ.ಜಿ. ನಾಗರಾಜು
ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮದ ವ್ಯವಸ್ಥಾಪಕ ನಿರ್ದೇಶಕ

ಬೆಳೆ, ಪ್ಯಾಕಿಂಗ್ ಬಗ್ಗೆ ತರಬೇತಿ

ಸೂಕ್ತ ಸಸ್ಯ ಸಂರಕ್ಷಣಾ ಕ್ರಮಗಳನ್ನು ಕೈಗೊಳ್ಳುವ ಮೂಲಕ ರೈತರು ಮಾವಿನ ಉತ್ತಮ ಇಳುವರಿಯನ್ನು ನಿರೀಕ್ಷೆ ಮಾಡಬಹುದಾಗಿದೆ. ಯಾವುದೇ ಬೆಳೆ ಬೆಳೆಯುವಾಗ ರೈತರು ಎಷ್ಟು ಕಾಳಜಿ ತೋರುತ್ತಾರೋ, ಕೊಯ್ದು- ಮಾಗಿಸಿ ಹಣ್ಣನ್ನು ಪ್ಯಾಕ್ ಮಾಡುವಾಗಲೂ ಆಷ್ಟೇ ಜಾಗ್ರತೆ ವಹಿಸಬೇಕಾಗಿದೆ. ಅದಕ್ಕಾಗಿ ರೈತರಿಗೆ ಮಾಹಿತಿ ಹಾಗೂ ತರಬೇತಿಯ ಅಗತ್ಯವಿದ್ದು, ಈ ನಿಟ್ಟಿನಲ್ಲಿ ನಿಗಮವು ರೈತರಿಗೆ 2019ರಿಂದ ವ್ಯವಸ್ಥಿತ ತರಬೇತಿ ನೀಡುತ್ತಿದೆ. ತರಬೇತಿ ಪಡೆದ ರೈತರು ಉತ್ತಮ ಇಳುವರಿ ಗಳಿಸಿ, ಲಾಭದಾಯಕ ವ್ಯವಸಾಯದತ್ತ ಮುಖ ಮಾಡಿದ್ದಾರೆ. ಮಾವು ನಿಗಮವು ಹೆಚ್ಚು ಹೆಚ್ಚು ರೈತರಿಗೆ ತರಬೇತಿ ನೀಡುವ ನಿಟ್ಟಿನಲ್ಲಿ ತೋಟಗಾರಿಕೆ ಇಲಾಖೆ ಜತೆ ಕೈಜೋಡಿಸಿ ರಾಜ್ಯಾದ್ಯಂತ ಎಲ್ಲ ಜಿಲ್ಲೆಗಳಲ್ಲಿ ತಾಂತ್ರಿಕ ಮಾಹಿತಿ ಮತ್ತು ತರಬೇತಿಗಳನ್ನು ನೀಡಿ ಗುಣಮಟ್ಟದ ಹಣ್ಣುಗಳ ಉತ್ಪಾದನೆಗೆ ಪಣ ತೊಟ್ಟಿದೆ.

ಆನ್‌ಲೈನ್ ಮೂಲಕ ಆರ್ಡರ್ ಮಾಡಿ...

ಮಧ್ಯವರ್ತಿಗಳ ಹಾವಳಿಗೆ ಕಡಿವಾಣ ಹಾಕಿ, ಗ್ರಾಹಕರಿಗೆ ಕಡಿಮೆ ದರದಲ್ಲಿ ಗುಣಮಟ್ಟದ ಹಣ್ಣನ್ನು ನೀಡುವ ಉದ್ದೇಶದಿಂದ ಪ್ರಾರಂಭಿಸಿದ ಅಂಚೆ ಇಲಾಖೆಯ ವಿನೂತನ ಪ್ರಯತ್ನಕ್ಕೆ ಕೈಹಾಕಿದೆ. karsirimangoes.karnataka.gov.in ವೆಬ್‌ಸೈಟ್ ಮೂಲಕ ಬೆಂಗಳೂರು ನಗರ ನಿವಾಸಿಗಳು ಮಾವಿನಹಣ್ಣನ್ನು ಆನ್‌ಲೈನ್‌ನಲ್ಲಿ ಬುಕಿಂಗ್ ಮಾಡಬಹುದು. ಬಾದಾಮಿ, ರಸಪೂರಿ ಸೇರಿ 10 ತಳಿಯ ಮಾವು ಲಭ್ಯವಿದೆ. ವೈಯಕ್ತಿಕ ಗ್ರಾಹಕರ ಜತೆಗೆ, ಅಪಾರ್ಟ್‌ಮೆಂಟ್/ ಸಂಸ್ಥೆ ಇತ್ಯಾದಿ ಬೃಹತ್ ಖರೀದಿದಾರರು ಪೋರ್ಟಲ್ ಮೂಲಕ ಖರೀದಿಸಬಹುದು. ಅಪಾರ್ಟ್‌ಮೆಂಟ್, ಮಾಲ್ ಕಂಪನಿಗಳು ಇ-ಮೇಲ್ (ksmdmc@gmail.com) ಮೂಲಕ ಕೊಳ್ಳಬಹುದು.



Vijayavani pg 3A

For more information visit University Library Website
Web - uasbagrilibindia.org
E-mail- librarian@uasbangalore.edu.in

ತಿಂಗಳ ಹಿಂದೆ 25 ರು. ಇದ್ದ ತೆಂಗಿನಕಾಯಿ ಬೆಲೆ ಸದ್ಯ 65-80 ರು.

ಇಳುವರಿ ಕುಸಿತ ಹೆಚ್ಚಿದ ತೆಂಗಿನಕಾಯಿ ಬೆಲೆ



ಬೆಂಗಳೂರು: ನಗರದಲ್ಲಿ ಬಿಸಿಲಿನ ಹೆಚ್ಚಳದಿಂದ ಎಳ ನೀರಿಗೆ ಬೇಡಿಕೆ ಹೆಚ್ಚಾದ ಬೆನ್ನಲ್ಲೇ ತೆಂಗಿನ ಕಾಯಿಯ ಕೊರತೆ ಕಂಡು ಬಂದಿದ್ದು, ಪೂರೈಕೆಯ ಕೊರತೆ ಹಾಗೂ ವಿವಿಧ ಕಾರಣಗಳಿಂದಾಗಿ ತೆಂಗಿನ ಕಾಯಿ ಬೆಲೆ ಗಗನಕ್ಕೇರಿದೆ.

ಕಳೆದ ವರ್ಷ ಮಳೆ ಕಡಿಮೆಯಾಗಿ ಬರಗಾಲ ಆವರಿಸಿದ್ದರಿಂದ ಇಳುವರಿ ಕುಸಿತವಾಗಿದೆ. ಇದೇ ಕಾರಣಕ್ಕೆ ಉತ್ತಮ ಗುಣಮಟ್ಟದ ತೆಂಗಿನಕಾಯಿ ಬೆಲೆ ಗಗನಮುಖಿಯಾಗಿದೆ. ಎಳನೀರಿಗೆ ಉತ್ತಮ ಬೆಲೆ ಲಭ್ಯವಾಗುತ್ತಿದ್ದು, ರೈತರು ತೋಟಗಳಲ್ಲಿ ಎಳನೀರನ್ನೇ ಮಾರಾಟ ಮಾಡುತ್ತಿದ್ದಾರೆ. ಹೀಗಾಗಿ ತೆಂಗಿನಕಾಯಿಗೆ ಕೊರತೆ ಉಂಟಾಗಿದೆ.

ನಗರದಲ್ಲಿ ತಿಂಗಳ ಹಿಂದೆ 25 ರು. ಇದ್ದ ತೆಂಗಿನಕಾಯಿ ಬೆಲೆ ಸದ್ಯ 65-80 ರು. ಆಗಿದ್ದು, ಆಹಾರ ಪದಾರ್ಥಗಳಲ್ಲಿ ತೆಂಗಿನ ಕಾಯಿ ಬಳಕೆ ಮಾಡಲು, ಪೂಜೆ ಪುನಸ್ಕಾರಗಳಿಗೆ ತೆಂಗಿನಕಾಯಿಯ ಖರೀದಿಯದ್ದೇ ಜನರಿಗೆ ದೊಡ್ಡ ಸಮಸ್ಯೆಯಾಗಿ ಪರಿಣಮಿಸಿದೆ. ಬೆಲೆ ಏರಿಕೆಯಿಂದಾಗಿ ನಗರದಲ್ಲಿ ಹೋಟೆಲ್, ಸಭೆ ಸಮಾರಂಭದಲ್ಲಿಯೂ ತೆಂಗಿನಕಾಯಿಗಳ ಬಳಕೆ ಕಡಿಮೆಯಾಗುತ್ತಿದೆ. ಹೋಟೆಲ್ ತಿಂಡಿಗಳಲ್ಲಿ ಚಟ್ನಿಗಳಿಗೆ ತೆಂಗಿನಕಾಯಿಯ ಕೊರತೆ ಕಂಡು ಬರುತ್ತಿದ್ದು ಸದ್ಯ ತೆಂಗಿನ ಕಾಯಿಯ ಕೊರತೆ ಬಹುದೊಡ್ಡ ಸಮಸ್ಯೆಯಾಗಿ ಪರಿಣಮಿಸಿದೆ.

ಬೆಂಗಳೂರಿಗೆ ತುಮಕೂರು, ಹಾಸನ ಮಂಡ್ಯದಿಂದ ತೆಂಗಿನಕಾಯಿ ಸರಬರಾಜಾಗುತ್ತದೆ. ಆಂಧ್ರ ಪ್ರದೇಶ, ತಮಿಳುನಾಡು ಮತ್ತು ಕೇರಳ ರಾಜ್ಯಗಳಿಂದಲೂ ತೆಂಗಿನಕಾಯಿ ಪೂರೈಕೆಯಾಗುತ್ತದೆ. ಎರಡು ಮೂರು ತಿಂಗಳ ಹಿಂದೆ 20-25 ರು.ಗೆ ಉತ್ತಮ ತೆಂಗಿನ ಕಾಯಿ ಸಿಗುತ್ತಿತ್ತು. ಈಗ ಅದೇ ತೆಂಗಿನಕಾಯಿ ಬೆಲೆ 80 ರು. ಗಡಿ ದಾಟಿದೆ. ತೆಂಗಿನಕಾಯಿ ಬೆಲೆ ಇಳಿಯಲು ಬಹುಶಃ ಇನ್ನೂ ಒಂದು ತಿಂಗಳು ಕಾಯಬೇಕಾಗುತ್ತದೆ ಎಂದು ತೆಂಗಿನಕಾಯಿ ವ್ಯಾಪಾರಿಗಳು ಹೇಳುತ್ತಾರೆ.

ದರ ಏರಿಕೆಯಿಂದ ತೆಂಗಿನಕಾಯಿ ಬಳಕೆ ಕಡಿಮೆ

ವಿವಾಹ ಸಮಾರಂಭಗಳ ಕ್ಯಾಟರರ್ ಮಾತನಾಡಿ, 1000 ಜನರಿಗೆ ಅಡುಗೆ ಮಾಡುವ ಕಡೆ ಚಟ್ನಿಗೆ 150-200 ಮತ್ತು ಅಡುಗೆಗೆ 150-200 ತೆಂಗಿನಕಾಯಿ ಬಳಸುತ್ತಿದ್ದೆವು. ದರ ಹೆಚ್ಚಿರುವುದರಿಂದ ತೆಂಗಿನಕಾಯಿ ಬಳಕೆಯನ್ನು 80-100ರಷ್ಟು ಕಡಿಮೆ ಮಾಡಿದ್ದೇವೆ. ಕೇವಲ ತೆಂಗಿನಕಾಯಿ ಮಾತ್ರವಲ್ಲ, ಹಾಲು, ಗ್ಯಾಸ್, ಸಂಬಳ, ಡೀಸೆಲ್, ಬಾಡಿಗೆ, ತೆರಿಗೆ ಸೇರಿದಂತೆ ಎಲ್ಲದರ ಬೆಲೆ ಏರಿಕೆಯಾಗಿದೆ. ತೆಂಗಿನಕಾಯಿ ಬಳಕೆಯನ್ನು ಶೇ.50 ರಷ್ಟು ಕಡಿಮೆ ಮಾಡಿದ್ದೇವೆ. ಸಹಜವಾಗಿಯೇ ನಾವು ಗ್ರಾಹಕರನ್ನು ಕಳೆದುಕೊಳ್ಳಬೇಕಾದ ಪರಿಸ್ಥಿತಿ ಎದುರಾಗಿದೆ ಎಂದರು.

Viswavani Pg 06

ಇಂದು ಚಾಣಕ್ಯ ವಿವಿಯಲ್ಲಿ 'ರೈತ ಸಿರಿ' ಸಮಾರಂಭ

ಬೆಂಗಳೂರು: ಚಾಣಕ್ಯ ವಿಶ್ವವಿದ್ಯಾಲಯದ ವತಿಯಿಂದ ಗುರುವಾರ ದೇವನಹಳ್ಳಿಯ ಚಾಣಕ್ಯ ವಿಶ್ವವಿದ್ಯಾಲಯದ ಗ್ಲೋಬಲ್ ಕ್ಯಾಂಪಸ್‌ನಲ್ಲಿ ರೈತ ಸಿರಿ ಸಮಾರಂಭವನ್ನು ಹಮ್ಮಿಕೊಳ್ಳಲಾಗಿದೆ. ಬೆಳಗ್ಗೆ 9ರಿಂದ ಸಂಜೆ 4ರವರೆಗೆ ನಡೆಯುವ ಕಾರ್ಯಕ್ರಮದಲ್ಲಿ ಅಕ್ಷಯ ಕಲ್ಪ ಆರ್ಗ್ಯಾನಿಕ್ ಸಹ ಸಂಸ್ಥಾಪಕ ಶಶಿ ಕುಮಾರ್, ಸಹಾಯಕ ತೋಟಗಾರಿಕೆ ಅಧಿಕಾರಿ ಡಾ.ಹರೀಶ್ ಕುಮಾರ್, ಚೆನ್ನಹಳ್ಳಿ ಗ್ರಾಪಂ ಅಧ್ಯಕ್ಷ ರಾಧಾಕೃಷ್ಣ ಇಸ್ರೋ ಪೀಠ-ಎನ್‌ಐಎಎಸ್ ಪ್ರಾಧ್ಯಾಪಕ ಡಾ.ಪಿ.ಜಿ.ದಿವಾಕರ್, ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರದ ಮಾಜಿ ನಿರ್ದೇಶಕ ಡಾ.ವಿ.ಎಸ್.ಪ್ರಕಾಶ್, ಚಾಣಕ್ಯ ವಿವಿಯ ಕುಲಾಧಿಪತಿ ಪ್ರೊ.ಎಂ.ಕೆ.ಶ್ರೀಧರ್, ಉಪ ಕುಲಾಧಿಪತಿ ಎಂ.ಪಿ.ಕುಮಾರ್, ಕುಲಪತಿ ಪ್ರೊ.ಯಶವಂತ ಡೋಂಗ್ರೆ, ಉಪ ಕುಲಪತಿ ಪ್ರೊ.ಎಚ್.ಎಸ್.ಸುಬ್ರಮಣ್ಯ ಇತರರು ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

Hosadiganta Pg 04

Udayavani Pg 03

ಕೃಷಿ ತಂತ್ರಜ್ಞರ ಸಂಸ್ಥೆಗೆ ಪದಾಧಿಕಾರಿಗಳ ಆಯ್ಕೆ

ಬೆಂಗಳೂರು: ಕೃಷಿ ತಂತ್ರಜ್ಞರ ಸಂಸ್ಥೆಯ ಅಧ್ಯಕ್ಷರಾಗಿ ತೋಟಗಾರಿಕೆ ತಜ್ಞ ಡಾ. ಎ.ಬಿ. ಪಾಟೀಲ್ ಆಯ್ಕೆಯಾಗಿದ್ದಾರೆ. ಸಂಸ್ಥೆಯ 2025-29ರ ಸಾಲಿನ ಆಡಳಿತ ಮಂಡಳಿಗೆ ಇತ್ತೀಚೆಗೆ ನಡೆದ ಚುನಾವಣೆಯಲ್ಲಿ 15 ಸದಸ್ಯರನ್ನು ಆಯ್ಕೆ ಮಾಡಲಾಗಿತ್ತು. ನಂತರ ನಡೆದ ಪ್ರಥಮ ಸಭೆಯಲ್ಲಿ ಹೊಸ ವ್ಯವಸ್ಥಾಪನಾ ಸಮಿತಿಗೆ ಪದಾಧಿಕಾರಿಗಳನ್ನು ಆಯ್ಕೆ ಮಾಡಿದ್ದು, ಜತೆಗೆ 9 ಮಂದಿಯನ್ನು ಸದಸ್ಯರನ್ನಾಗಿ ನಿಯೋಜನೆಗೊಳಿಸಲಾಗಿದೆ.



ಡಾ. ಎ.ಬಿ. ಪಾಟೀಲ್

ಪದಾಧಿಕಾರಿಗಳ ವಿವರ: ಅಧ್ಯಕ್ಷ- ಡಾ. ಎ.ಬಿ. ಪಾಟೀಲ್; ಉಪಾಧ್ಯಕ್ಷರು- ಡಾ. ನಾಗರಾಜು ಮತ್ತು ಡಾ. ವಿ.ಐ.ಬೆಣಗಿ; ಕಾರ್ಯದರ್ಶಿ- ಜಿ.ಎಚ್. ಯೋಗೀಶ್; ಜಂಟಿ ಕಾರ್ಯದರ್ಶಿ- ಸಿ.ಎಸ್. ಪಾಟೀಲ್; ಖಜಾಂಚಿ- ಜಿ. ರಾಮೇಗೌಡ. **ಸದಸ್ಯರು:** ಸಿ. ಲೋಕೇಶ್ವರ್, ಡಾ. ಟಿ.ಕೆ. ಪ್ರಭಾಕರ ಶೆಟ್ಟಿ. ಡಾ. ಎಸ್.ಬಿ. ಯೋಗಾ ನಂದ, ಡಾ. ಎಂ. ಭೀಮಣ್ಣ, ಡಾ. ಎ.ಪಿ. ಮಲ್ಲಿಕಾರ್ಜುನ ಗೌಡ, ಡಾ. ರಾಜು ಜಿ. ತೆಗ್ಗೆಳ್ಳಿ, ವಿ.ಎಸ್. ಪಾಟೀಲ್, ಎಫ್.ಆರ್. ನಿಡಗುಂದಿ ಮತ್ತು ಶರಣಪ್ಪ ಬಿ. ಕೊಂಗವಾಡ.

ICAR-NBSS & LUP, Hebbal, Bangalore-24

Walk-in interview for the temporary project staff will be held on 05/05/2025. For details please mail to **nbssgis@gmail.com** or **Contact: 080- 23410993**

Assistant Admin Officer

Times of Ind Pg 08

Times of Ind Pg 04

King of fruits back! Quality good, yield below expectations

Vindhya.Pabolu
@timesofindia.com

Bengaluru: Mango season has begun in Karnataka, with early varieties like Sindhura, Badami and Kapuri already brightening local markets. However, farmers and experts describe this year's harvest as a mixed bag—quality is good, but the yield is lower than expected.

Despite hopes for a strong "on-year" in mango production, growers estimate the yield at only 8-10 lakh metric tonnes, down from the usual 12–15 lakh tonnes. Unpredictable flowering patterns and high temperatures during fruit setting, along with pest issues, have impacted the crop.

Karnataka has around 1.5 lakh hectares under mango cultivation and over 2.8 lakh mango farmers. Key mango-growing districts include Kolar, Ramanagara, Chikkaballapur and Tumakuru in the south, which account for about 60% of the state's production, while the northern districts, particularly Belagavi, Dharwad, and Haveri, make up the rest. Early-season mangoes from Ramanagara are available in the market, but Kolar, which produces nearly two-thirds of Karnataka's mangoes, is lagging due to late flowering.

According to sources, 35% of the total yield is consumed within the state, 29-35% is sold in other states, 25% is lost post harvest and only about 1% is exported. Despite this year's medium yield, the state is not importing mangoes as the current production is sufficient only to meet local demand.

POSTAL SERVICE TO DELIVER MANGOES



File photo

Mangoes from Ramanagara are available in the market. Kolar, which produces two-thirds of the state's mangoes, is lagging due to late flowering

KSMDMCL has reintroduced its Mango Post service in collaboration with India Post, enabling booking and delivery directly from farmers to consumers. The service was launched at the General Post Office Tuesday.

"This initiative actually started before Covid pandemic, but it gained significant traction during lockdown. It has now become a regular part of our operations," said CG Nagaraju, MD, KSMDMCL. "Farmers are managing every aspect — from packing to logistics and final delivery. This direct-to-consumer approach has not only helped reduce post-harvest losses, but also secured better prices for growers."

CG Nagaraju, managing director, Karnataka State Mango Development and Marketing Corporation Ltd (KSMDMCL), said, "We had early flowering that gave good crop, but second round of flowering in Feb was hit hard by heat and sudden rain. The overall quality is better due to low pest incidence, but the yield is average. We will be getting major part of Karnataka produce into markets by June."

But farmers claim otherwise. They say this year was no better, despite better quality as there was a drop in the output due to delayed flowering and diseases. Bashir Ahmed, a mango farmer with a 5-acre farm in Srinivaspur of Kolar district, said, "We lost at least 10% of the crop due to recent rain. Besides that, 30% of the crop was lost to thrips disease. On average, where an acre was supposed to give at least two to three tonnes, it is giving only 1 tonne."

N Chinnappa Reddy, president of Kolar District Mango Growers Association, reported a sharp decline of 35–40% in this year's yield. "Flowering was delayed until March. This, along with the spread of thrips disease, worsened the situation. We were expecting around 10 lakh tonnes, but it looks like we'll only manage about 5 lakh tonnes from 32,000 acres in Kolar," he said.

A senior scientist from Indian Institute of Horticultural Research added, "In areas like Chikkaballapur, high temperatures and poor fruit retention have further reduced yield. And if it rains in May, fruit drop could become another major concern."